


International Journal of Kannada Research
www.kannadajournal.com

ISSN: 2454–5813
IJKR 2022; 8(2): 89-93
© 2022 IJKR
www.kannadajournal.com
Received: 18-02-2022
Accepted: 23-03-2022

ಜಮೀರ್ ಅಹಮದ್
ಉಪನ್ಯಾಸಕರು, ಕನ್ನಡ ವಿಭಾಗ
ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಕೊಡಗು, ಕರ್ನಾಟಕ, ಭಾರತ

Corresponding Author:
ಜಮೀರ್ ಅಹಮದ್
ಉಪನ್ಯಾಸಕರು, ಕನ್ನಡ ವಿಭಾಗ
ಜ್ಞಾನಕಾವೇರಿ ಸ್ನಾತಕೋತ್ತರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ, ಕೊಡಗು, ಕರ್ನಾಟಕ, ಭಾರತ

# ಮೈಸೂರು ನಗರದ ಮಸೀದಿಗಳು: ಒಂದು ಅವಲೋಕನ

ಜಮೀರ್ ಅಹಮದ್

**ಪರಿಚಯ**

ಮೈಸೂರು ನಗರ ಪ್ರದೇಶದಲ್ಲಿ ಎಲ್ಲಾ ಧರ್ಮಗಳಿಗೂ ಆಶ್ರಯ ನೀಡಿ ಇಂದಿಗೂ ಧಾರ್ಮಿಕ ಸಮನ್ವಯತೆಯನ್ನು ಸ್ಥಾಪಿಸಿಕೊಂಡಿರುವುದರಿಂದಲೇ 'ಸಾಂಸ್ಕೃತಿಕ ನಗರಿ ಮೈಸೂರು' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ನಗರದಲ್ಲಿ ನೆಲಸಿರುವ ಹಿಂದೂ ಮತ್ತು ಮುಸ್ಲಿಮರು ನಾವೆಲ್ಲರೂ ಒಂದೇ ಎಂಬ ಮನೋಭಾವನೆಯನ್ನು ಹೊಂದಿದ್ದಾರೆ.

ಇತಿಹಾಸ ಪ್ರಸಿದ್ಧವಾದ 'ಮೈಸೂರು ನಗರ'ದ ಬಹುತೇಕ ಎಲ್ಲಾ ಭಾಗಗಳಲ್ಲಿಯೂ ಅನೇಕ ಮಸೀದಿಗಳಿವೆ. ನಗರವು ವಿವಿಧ ಬಡಾವಣೆಗಳಾಗಿ ವಿಸ್ತಾರಗೊಂಡಂತೆ ಮಸೀದಿಗಳ ಸಂಖ್ಯೆಯೂ ಕೂಡ ಹೆಚ್ಚಾಗುತ್ತಾ ಬಂದಿವೆ. ನಗರದ ಮಸೀದಿಗಳು ಬಹುತೇಕ ಎಲ್ಲಾ ರೀತಿಯ ಪ್ರಾರ್ಥನಾ ಸೌಕರ್ಯಗಳನ್ನು ಹೊಂದಿವೆ. ಕೈ ಕಾಲು ಮುಖವನ್ನು ತೊಳೆದುಕೊಳ್ಳಲು ಅಂದರೆ ವಜೂ ಮಾಡಲು ಉತ್ತಮವಾದ ನೀರಿನ ವ್ಯವಸ್ಥೆ ಇದೆ. ಅನೇಕ ಮಸೀದಿಗಳ ಮುಂಭಾಗದಲ್ಲಿ ಸುಂದರವಾದ ಕೊಳ, ಆ ಕೊಳದ ಸುತ್ತಲು ವಜೂ ಮಾಡಲು ಕುಳಿತುಕೊಳ್ಳುವುದಕ್ಕೆ ಚಿಕ್ಕ ಚಿಕ್ಕ ಕಲ್ಲಿನ ಅಥವಾ ಗಾರೆಯ ಬೆಂಚುಗಳಿವೆ. ಇತರೆ ಮಸೀದಿಗಳಲ್ಲಿ ದೊಡ್ಡ ನೀರಿನ ಟ್ಯಾಂಕಿಗೆ ಚಿಕ್ಕ ಚಿಕ್ಕ ನಲ್ಲಿಗಳನ್ನು ಸಾಲು ಸಾಲಾಗಿ ಅಳವಡಿಸಿರುತ್ತಾರೆ. ಎಲ್ಲಾ ಮಸೀದಿಗಳು ಪೂರ್ವಾಭಿಮುಖವಾಗಿ ವಿಶಾಲವಾದ ಬಾಗಿಲುಗಳನ್ನು ಹೊಂದಿದ್ದು ಪಶ್ಚಿಮ ದಿಕ್ಕಿನ ಗೋಡೆಗಳಲ್ಲಿ ಅರಬ್ಬೀ ದೇಶದ ಮೆಕ್ಕಾ ನಗರದಲ್ಲಿನ ಮುಸ್ಲಿಮರ ಪುರಾತನ ಪ್ರಾರ್ಥನಾ ಮಂದಿರವಾಗಿರುವ ಕಾಬಾ ಮಂದಿರದ ದಿಕ್ಕನ್ನು ತೋರಿಸುವಂತಹ ಒಳಬಾಗು ಇವೆ. ಮಸೀದಿಯ ಒಳಗಡೆ ಪ್ರಾರ್ಥನೆ ಮಾಡುವವರ ಅನುಕೂಲಕ್ಕಾಗಿ ನೆಲದ ಮೇಲೆ ಜಮಖಾನಗಳನ್ನು ಹಾಸಲಾಗಿರುತ್ತದೆ. ನಗರದ ಮಸೀದಿಗಳು ಒಳಗೂ ಹೊರಗೂ ಆಕರ್ಷಣೀಯ ಕಲಾಕೌಶಲ್ಯಗಳಿಂದ ಕೂಡಿದ್ದು ಅವುಗಳ ಮೇಲೆ ಸುಂದರವಾದ ಮಿನಾರ್‌ಗಳಿರುವುದು ಕಂಡು ಬರುತ್ತದೆ.

ನಗರದಲ್ಲಿ ಕಂಡು ಬರುವ ಮುಸ್ಲಿಮರ ಧಾರ್ಮಿಕ ಕೇಂದ್ರವಾದ ಮಸೀದಿಗಳಲ್ಲಿ ಸರ್ಕಾರವೇ ನೇರವಾಗಿ ಆಡಳಿತ ನಡೆಸುವ ಮಸೀದಿಗಳಿದ್ದರೆ, ಕೆಲವು ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದ ಜವಾಬ್ದಾರಿಯಲ್ಲಿ ನಡೆಯುವ ಮಸೀದಿಗಳು, ಇನ್ನೂ ಕೆಲವು ಸಂಪೂರ್ಣವಾಗಿ ಖಾಸಗಿಯವರ ಆಡಳಿತಕ್ಕೆ ಒಳಪಟ್ಟ ಮಸೀದಿಗಳು ಇವೆ. ನಗರದಲ್ಲಿ ಈಗ ಸುಮಾರು ನೂರ ಐವತ್ತಕ್ಕಿಂತಲೂ ಹೆಚ್ಚು ಮಸೀದಿಗಳಿದ್ದು ಅವುಗಳಲ್ಲಿ ಕೆಲವು ಸರ್ಕಾರದ ವಕ್ಫ್ ಇಲಾಖೆಯಡಿಯಲ್ಲೂ (ಫಚಿಇಜಿ ಆಜರಿಚಿಡಿಣಟಜಟಣ–ಮುಜರಾಯಿ ಇಲಾಖೆ), ಇನ್ನುಳಿದವು ನಾನಾ ಸಂಘ–ಸಂಸ್ಥೆಗಳ ಮೇಲ್ವಿಚಾರಣೆಯಲ್ಲೂ ನಿರ್ವಹಣೆಗೆ ಒಳಪಟ್ಟಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿರುವ ಮಸೀದಿಗಳನ್ನು ಕುರಿತು ಸಂಗ್ರಹಿಸಿದ ದಂತ್ತಾಂಶಗಳ ಹಿನ್ನೆಲೆಯಲ್ಲಿ ಸಾಧ್ಯವಾದಷ್ಟು ವಿವರಿಸಲಾಗಿದೆ.

**ದೊಡ್ಡ ಮಸೀದಿ (ಜಾಮೀಯ ಮಸೀದಿ)**

ನಗರದ ಇರ್ವಿನ್ ರಸ್ತೆಯಿಂದ ದೊಡ್ಡ ಪೇಟೆಗೆ ಹೋಗುವ ಮಾರ್ಗದಲ್ಲಿರುವ ಈ 'ದೊಡ್ಡ ಮಸೀದಿ' ಅಥವಾ 'ಜಾಮೀಯ ಮಸೀದಿ'ಯು ಹಿಂದೆ 'ಚಿಕ್ಕ ಮಸೀದಿ' ಎಂದು ಕರೆಯಲ್ಪಡುತ್ತಿತ್ತು. ಆದರೆ ಈಗ ಇದನ್ನು 'ದೊಡ್ಡ ಮಸೀದಿ' ಎಂದು ಕರೆಯಲಾಗುತ್ತಿದೆ. ಇದರ ಉತ್ತರ ಭಾಗದ ದೊಡ್ಡ ಎತ್ತರವಾದ ಗೋಡೆ ಮಾಡಗೂಡುಗಳಿಂದ ಕೊರೆಯಲ್ಪಟ್ಟಿದೆ. ಉತ್ತರದ ದೊಡ್ಡ ಬಾಗಿಲು ಮಹಾದ್ವಾರದಂತಿದೆ. ಈ ಮಸೀದಿಯ ಒಳಾಂಗಳದಲ್ಲಿರುವ ಸುಂದರವಾದ ಕೊಳ, ಪ್ರಾರ್ಥನಾ ಮಂದಿರವು ಕಲಾ ಕೌಶಲ್ಯದಿಂದ ಕೂಡಿದ್ದು ನೋಡಲು ಬಹಳ ಸುಂದರವಾಗಿದೆ.

ಈ ದೊಡ್ಡ ಮಸೀದಿಯ ಎರಡು ಕಂಬಗಳು (ಮಿನಾರ್‌ಗಳು) ಬಹಳ ಎತ್ತರವಾಗಿದ್ದು ಆಕರ್ಷಣೀಯವಾಗಿ ಕಾಣುತ್ತದೆ. ಹಬ್ಬದ ದಿನಗಳಲ್ಲಿ ಈ ಕಂಬಗಳು ವಿಶೇಷವಾಗಿ ವಿದ್ಯುದ್ದೀಪಗಳಿಂದ ಪ್ರಕಾಶಿಸುತ್ತವೆ.

ಕ್ರಿ.ಶ.೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ಮೈಸೂರು ಸಂಸ್ಥಾನವನ್ನು ಯದುವಂಶದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಉತ್ತರಾಧಿಕಾರವನ್ನು ಹಿಂದಕ್ಕೆ ವಹಿಸಿದ ಸಂದರ್ಭದಲ್ಲಿ ಬ್ರಿಟಿಷ್ ಸೇನೆಯನ್ನು ಇಲ್ಲಿ ಇರಿಸಲಾಗಿತ್ತು. ಸೇನೆಯ ಕುದುರೆ ಸವಾರರ ಗುಂಪು ಸಹ ಇಲ್ಲಿ ನೆಲಸಿತ್ತು. ಇವರ ಪ್ರಧಾನ ಕಛೇರಿ ಕೋಲ್ ಸಾಹೇಬರ ತೋಟದಲ್ಲಿತ್ತು. ಈ ಭಾಗದ ಬಹಳಷ್ಟು ಪ್ರದೇಶವನ್ನು ಸೈನಿಕರೇ ತಮ್ಮ ತಾಣವಾಗಿ ಬಳಸಿಕೊಂಡಿದ್ದರಿಂದ ಈ ಸ್ಥಳವನ್ನು 'ಲಷ್ಕರ್ ಮೊಹಲ್ಲಾ ಸೇನಾಬೀಡು' ಎಂದು ಕರೆಯಲಾಗುತ್ತದೆ. ಈಗಲೂ ಅಲ್ಲಿ ಎದ್ದು ಕಾಣುವ ದೊಡ್ಡ ಕಟ್ಟಡ ಸೇನಾ ಕೇಂದ್ರವಾಗಿತ್ತು. ಈ ಮನೆಯನ್ನು ಕಂಟೋನ್ಮೆಂಟ್ ಎಂದು ಕರೆಯಲ್ಪಡುತ್ತಾ ಇಂದಿಗೂ ಇದೆ. ಈ ಕಟ್ಟಡದ ಸುತ್ತಲೂ ದಂಡಿನವರ ಸಾಲುಮನೆ ಮತ್ತು ಶಸ್ತ್ರಶಾಲೆಗಳಿದ್ದ ಕುರುಹುಗಳು ಕಂಡು ಬರುತ್ತವೆ. ಸೈನ್ಯದಲ್ಲಿದ್ದ ಬಹುಮಂದಿ ಮುಸ್ಲಿಮರೇ ಆಗಿದುದರಿಂದ ಅವರ ಪ್ರಾರ್ಥನೋಪಯೋಗಕ್ಕಾಗಿ ಈ ಚಿಕ್ಕ ಮಸೀದಿಯನ್ನು ಕಟ್ಟಲ್ಪಟ್ಟಿತ್ತು. ಹೆಚ್ಚಿಗೆ ಕುದುರೆ ಸವಾರರೇ ಈ ಮೊಹಲ್ಲಾದಲ್ಲಿ ಇದ್ದುದರಿಂದ ಇದು ಲಷ್ಕರ್ ಮೊಹಲ್ಲಾ ಎಂದು ಕರೆಯಲ್ಪಟ್ಟಿತು.

ಈ ಮಸೀದಿಯಲ್ಲಿದ್ದು ನೋಂದಣಿ ಹೊಂದಿದ್ದ ಈಗ ಉಪಲಬ್ಧವಿಲ್ಲದ ಒಂದು ಪರ್ಶಿಯನ್ ಭಾಷೆಯ ಶಾಸನದಲ್ಲಿ ಮಹಾರಾಜ ಕಿಶನ್ ಅಂದರೆ ಕೃಷ್ಣರಾಜ ಒಡೆಯರು ಕ್ರಿ.ಶ. ೧೯೨೧ರಲ್ಲಿ ಈ ಮಸೀದಿಯ ಪುನರ್ ನಿರ್ಮಾಣ ಮಾಡಿಸಿದರೆಂದು ಹೇಳಿದೆ. ಈ ಶಾಸನದ ಕವಿತೆಯನ್ನು ಅಬು ಹಸನತ್ ಅವರ ಇಚ್ಛೆಯಂತೆ ವಲಿ ಎಂಬುವವರು ರಚಿಸಿದ್ದಾರೆ.

ತನ್ನ ಮುಸ್ಲಿಂ ಸೈನಿಕರ ಧಾರ್ಮಿಕ ಉಪಯೋಗಕ್ಕಾಗಿ ಈ ಮಸೀದಿಯನ್ನು ನಿರ್ಮಿಸಿಕೊಟ್ಟ ವ್ಯಕ್ತಿ ಓರ್ವ ಹಿಂದೂ ರಾಜ ಎನ್ನುವುದು ಮೈಸೂರು ಸಂಸ್ಥಾನವನ್ನಾಳಿದ ರಾಜರುಗಳ ಧಾರ್ಮಿಕ ಸಹಿಷ್ಣುತೆ, ಔದಾರ್ಯ, ರಾಜಧರ್ಮ ಮತ್ತು ಪ್ರಜೆಗಳ ಜಾತಿ ಮತಗಳು ಯಾವುದಾದರೂ ಎಲ್ಲರೂ ಒಂದೇ, ಸರಿ ಸಮಾನರು ಎಂಬ ಸದ್ಗುಣಕ್ಕೆ ಸಾಕ್ಷಿಯಾಗಿದೆ.

**ಜುಮ್ಮಾ ಮಸೀದಿ**

ಕ್ರಿ.ಶ. ೧೭೯೯ರಲ್ಲಿ ಮೈಸೂರು ಸಂಸ್ಥಾನದ ರಾಜ್ಯಾಡಳಿತ ಒಡೆಯರ್ ವಂಶಕ್ಕೆ ಮರಳಿ ಬಂದ ನಂತರದಲ್ಲಿ ಮೈಸೂರು ಸಂಸ್ಥಾನದ ರಾಜಧಾನಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಗೊಂಡಿತು. ಆ ಸಂದರ್ಭದಲ್ಲಿ ಶ್ರೀರಂಗಪಟ್ಟಣದಿಂದ ಮೈಸೂರಿಗೆ ಬಂದು ನೆಲಸಿದ ಮುಸ್ಲಿಮರಿಗೆಂದು, ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಕ್ರಿ.ಶ. ೧೮೩೦ರಲ್ಲಿ ಕಟ್ಟಿಸಿದಂತಹ ಇನ್ನೊಂದು ಮಸೀದಿಯಾಗಿದೆ. ನಗರದ ರೈಲ್ವೇ ಸ್ಟೇಷನ್ ರಸ್ತೆಯ ದಕ್ಷಿಣಕ್ಕಿರುವ ಈ ಮಸೀದಿಯ ನಿರ್ಮಾಣ ಮತ್ತು ನಿರ್ವಹಣೆಯ ವೆಚ್ಚವನ್ನೆಲ್ಲಾ ಸರ್ಕಾರವೇ ವಹಿಸಿಕೊಂಡಿದ್ದು ಅಂದಿನ ಮಹಾರಾಜರಲ್ಲಿದ್ದಂತಹ ಸರ್ವಧರ್ಮ ಸಮನ್ವಯತೆಗೆ ಹಿಡಿದ ಕೈಗನ್ನಡಿಯಾಗಿದೆ.

ನಗರದ ಮಸೀದಿಗಳಲ್ಲಿ ಅತಿ ದೊಡ್ಡ ಮಸೀದಿ ಇದಾಗಿದ್ದು ನೋಡಲು ಬಹಳ ಸುಂದರವಾಗಿದೆ. ಮೀರ್ ನವಾಬ್ ನಿಜಾಮುದ್ದೀನ್ ಅಲಿಖಾನ್ ನೀಡಿದ ೫ ಸಾವಿರ ರೂಪಾಯಿಗಳ ಕೊಡುಗೆಯಿಂದ ಒಂದು ಹೊಸ ಮುಸಾಫಿರ್ ಖಾನಾ ಅಥಿತಿ ಗೃಹ ಮಸೀದಿಯ ಆವರಣದೊಳಗೆ ನಿರ್ಮಾಣಗೊಂಡಿದೆ. ಒಂದು ನೂರ ವರ್ಷಗಳ ಕಾಲ ಸತತ ಬಳಕೆಯಲ್ಲಿದ್ದುದರಿಂದ, ಜೊತೆಗೆ ಈ ಅವಧಿಯಲ್ಲಿ ರಾಜಧಾನಿಯ ಜನಸಂಖ್ಯೆಯ ಪ್ರಮಾಣ ಸಾಕಷ್ಟು ವೃದ್ಧಿಸಿದರ ಪರಿಣಾಮದಿಂದಾಗಿ ಜುಮ್ಮಾ ಮಸೀದಿ ಮತ್ತು ಇದರೊಂದಿಗಿರುವ ಲಂಗರ್ ಖಾನದ ಕಟ್ಟಡ ಸಾಕಷ್ಟು ಶಿಥಿಲಗೊಂಡು, ಇದರ ದುರಸ್ಥಿ ಕಾರ್ಯ ಮಾಡಿಸಿ ಕಟ್ಟಡದ ವಿಸ್ತರಣೆ ಮಾಡುವ ಅವಶ್ಯಕತೆ ಇದುದ್ದರಿಂದ ಸುಮಾರು ೩೮ ಸಾವಿರ ರೂಪಾಯಿಗಳ ವೆಚ್ಚದಲ್ಲಿ ಸರ್ಕಾರದ ಇಂಜಿನಿಯರ್‌ಗಳು ಈ ದುರಸ್ಥಿ ಮತ್ತು ವಿಸ್ತರಣೆಯ ಕಾರ್ಯವನ್ನು ಪೂರ್ಣಗೊಳಿಸಿದರು.

ಈ ಎಲ್ಲವುಗಳ ವೆಚ್ಚದ ನಿರ್ವಹಣೆಯನ್ನು ರಾಜ್ಯ ಮುಜರಾಯಿ ಇಲಾಖೆ ವಹಿಸಿಕೊಂಡಿದೆ. ಈ ನವೀಕೃತ ಜುಮ್ಮಾ ಮಸೀದಿ ಸಂಕೀರ್ಣದ ಉದ್ಘಾಟನೆಯನ್ನು ೧೯೨೭ನೇ ಏಪ್ರಿಲ್ ೬ರಂದು ನಾಲ್ವಡಿ ಕೃಷ್ಣರಾಜ ಒಡೆಯರ್ ನೆರವೇರಿಸಿದರು.

"ಯಾಕೋ ಇತ್ತೀಚೆಗಿನ ದಿನಗಳಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಧರ್ಮಾಚರಣೆ ಸಂಬಂಧವಾಗಿ ತೀವ್ರ ಘರ್ಷಣೆಗಳುಂಟಾಗುತ್ತಿರುವುದು ದುಃಖದ ಸಂಗತಿಯಾಗಿದೆ. ಇದನ್ನು ನೋಡಿದಾಗ ಒಳಗಿನ ತಿರುಳನ್ನು ಮರೆತು ಹೊರಗಿನ ನೆರಳಿಗೆ ಆದ್ಯತೆ ನೀಡಿ ಕಚ್ಚಾಡುತ್ತಿರುವಂತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಆದರೆ ನನ್ನ ಪ್ರಜೆಗಳಲ್ಲಿ ಈ ರೀತಿಯ ಮನೋಭಾವ ಇಲ್ಲದಿರುವುದು ಸಂತೋಷಕರ ವಿಷಯವಾಗಿದೆ. ಇಂದು ನಾನು ಉದ್ಘಾಟಿಸುತ್ತಿರುವ ಈ ಜುಮ್ಮಾ ಮಸೀದಿಯು ಜಾತಿವಾದಿ ಸಂಕುಚಿತ ಪೂರ್ವಾಗ್ರಹ ಮತ್ತು ವೈಷಮ್ಯಗಳನ್ನು, ದ್ವೇಷದ ಭಾವನೆಯನ್ನು ನಾಶಗೊಳಿಸುವುದರೊಂದಿಗೆ ದೇವರೊಡನೆ ಸಾಕ್ಷಾತ್ಕಾರ ಹೊಂದುವ ಚಿರಂತನ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದು ನಂಬಿದ್ದೇನೆ.... ಈ ಮಸೀದಿಯ ಪುನರ್ ನಿರ್ಮಾಣಕ್ಕೆ ಹೆಚ್ಚು ಕಾಲ ತಗುಲಿದೆ. ಅದೇ ರೀತಿ ಇದು ಹಲವಾರು ಪೀಳಿಗೆಗಳಿಗೆ ಸ್ಫೂರ್ತಿಯ ನೆಲೆಯಾಗಿ, ಸ್ನೇಹ, ಪ್ರೇಮ, ಸಾಮರಸ್ಯ, ಸೌಹಾರ್ದತೆಯ ಸಂದೇಶವಾಗಿ, ನಿಮ್ಮ ಧರ್ಮದ ಅತ್ಯುನ್ನತ ಮತ್ತು ಅತ್ಯಂತ ಶ್ರೇಷ್ಠ ತತ್ವ, ಆದರ್ಶಗಳ ಕೇಂದ್ರವಾಗಿ ಸಮಾಜಕ್ಕೆ ದಾರಿ ದೀಪವಾಗಿರುತ್ತದೆ ಎಂದು ಆಶಿಸುತ್ತೇನೆ. ಭಗವಂತನಲ್ಲಿ ಇದೇ ನನ್ನ ಪ್ರಾರ್ಥನೆ" ಎಂದು ಒಡೆಯರ್ ಅವರು ಮಸೀದಿ ಸಂಕೀರ್ಣದ ಉದ್ಘಾಟನಾ ಸಂದರ್ಭದಲ್ಲಿ ಆಡಿದ ಮಾತುಗಳು ಅವರ ಮುತ್ಸದ್ದಿತನಕ್ಕೆ, ಧರ್ಮಸಹಿಷ್ಣುತೆ, ಪ್ರಜಾಪಾಲನಾ ದೃಷ್ಟಿ, ಸರ್ವಧರ್ಮ ಸಮನ್ವಯ ಭಾವನೆಗೆ ಸಾಕ್ಷಿಯಾಗಿವೆ.

**ಹಾಲೈನ್ ಮೆಮ್ಮನ್ ಮಸೀದಿ**

ಅತ್ಯಂತ ಸುಂದರವಾಗಿರುವ ಈ ದೊಡ್ಡ ಮಸೀದಿಯು ನಗರದ ಶಿವರಾಮಪೇಟೆಯಲ್ಲಿದೆ. ಉತ್ತಮ ಕಲಾ ಕೌಶಲದಿಂದ ಕಟ್ಟಿರುವ ಮೈಸೂರು ನಗರದ ಮಧ್ಯ ಭಾಗದಲ್ಲಿರುವ ಈ ಮಸೀದಿಯಲ್ಲಿ ವ್ಯಾಪಾರಸ್ಥರು ಹಾಗೂ ಸುತ್ತಮುತ್ತಲಿನ ನಿವಾಸಿಗಳು ಇಂದಿಗೂ ಪ್ರತಿ ದಿನದ ಐದು ಹೊತ್ತಿನ ನಮಾಜ್‌ನಲ್ಲಿ ಹಾಜರಾಗುತ್ತಾರೆ.

ಈ ಹಿಂದೆ ಮೈಸೂರಿನ ಸಂತೇಪೇಟೆಯ ವ್ಯಾಪಾರವು ಸಾಮಾನ್ಯ ದಿನಸಿ ವ್ಯಾಪಾರಸ್ಥರಾಗಿದ್ದ ಹಾಲೈನ್ ಮೆಮ್ಮನ್ ಪಂಗಡದವರ ಕೈಯಲ್ಲೇ ಬಹುಪಾಲು ಇದ್ದಿತು. ವ್ಯಾಪಾರಸ್ಥರಾಗಿ ಮೈಸೂರಿಗೆ ಬಂದು ನೆಲಸಿದ ಈ ಪಂಗಡದವರಿಂದ ಹಾಲೈನ್ ಮೆಮ್ಮನ್ ಮಸೀದಿಯು ಕಟ್ಟಲ್ಪಟ್ಟಿದೆ. ಇಂದಿಗೂ ಇದೇ ಜನಾಂಗದವರ ಆಡಳಿತಕ್ಕೂ ಸಹ ಒಳಪಟ್ಟಿದೆ. ನಗರದ ಮಧ್ಯಭಾಗದಲ್ಲಿರುವುದರಿಂದ ಇಲ್ಲಿನ ವ್ಯಾಪಾರಸ್ಥರು ಹಾಗೂ ಸುತ್ತಮುತ್ತಲಿನ ನಿವಾಸಿಗಳು ಮಸೀದಿಗೆ ಬಂದು ಐದು ಹೊತ್ತಿನ ನಮಾಜು ಮಾಡುವುದಕ್ಕೆ ಅನುಕೂಲವಿದೆ. ಈ ಮಸೀದಿಯ

ಮುಂಭಾಗದಲ್ಲಿ ವಝೂ ಮಾಡಲು ಸುಂದರವಾದ ಕೊಳ ಹಾಗೂ ಕುಳಿತುಕೊಳ್ಳುವುದಕ್ಕೆ ಬೆಂಚುಗಳಿವೆ.

ಈ ಮಸೀದಿಯಲ್ಲಿರುವ ಫರ್ಶಿಯನ್ ಭಾಷೆಯ ಶಾಸನದಲ್ಲಿ ಇದನ್ನು ಇಸ್ಮಾಯಿಲ್ ಎಂಬುವವರು ಕ್ರಿ.ಶ.೧೮೩೩ರಲ್ಲಿ ಕಟ್ಟಿಸಿದರೆಂದು ಹೇಳಿದೆ. ಈ ಶಾಸನವನ್ನು ಗುಲಾಂ ಜಿಲಾನಿ ರಚಿಸಿದ್ದಾನೆ. ಸೈಯದ್ ಮೊಹಮ್ಮದ್ ಕಂಡರಿಸಿದ್ದಾನೆ.

**ಹಯಾತ್ ಸಾಹೇಬರ ಮಸೀದಿ**

ನಗರದ ಸೆಂಟ್ರಲ್ ಜೈಲಿನ ಹಿಂಭಾಗದ ಪುಲಿಕೇಶಿ ರಸ್ತೆಯ ಪಕ್ಕದಲ್ಲಿರುವ ಮುಸ್ಲಿಮರ ಮುಖ್ಯ ಸ್ಮಶಾನ ಭೂಮಿಯ ಮುಂಭಾಗದಲ್ಲಿ ಈ ಮಸೀದಿ ಇದೆ. 'ಹಯಾತ್ ಸಾಹೇಬರ ಮಸೀದಿ' ಎಂದೇ ಪ್ರಸಿದ್ಧಿ ಪಡೆದಿರುವ ಈ ಮಸೀದಿಯು ಕ್ರಿ.ಶ. ೧೮೩೭ರಲ್ಲಿ ನಿರ್ಮಾಣವಾಯಿತೆಂದು ಇಲ್ಲಿ ದೊರೆತ ಉರ್ದು ಭಾಷೆಯ ಒಂದು ಶಾಸನದಲ್ಲಿ ಉಲ್ಲೇಖಗೊಂಡಿದೆ. ಈ ಮಸೀದಿಯ ಪಕ್ಕದಲ್ಲಿ ವಜೂ ಮಾಡಲು ಒಂದು ಕೊಳ ಸಹ ಇದೆ. ಇಲ್ಲಿನ ಸುತ್ತಮುತ್ತಲಿನ ಮುಸ್ಲಿಂ ಬಾಂಧವರು ದಿನದ ಐದು ಹೊತ್ತಿನ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

**ಕಚ್ಚಿ ಮೇಮನ್ ಮಸೀದಿ**

ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಪ್ರಾರ್ಥನೆ ಸಲ್ಲಿಸಲು ಬರುವ ದೊಡ್ಡ ಮಸೀದಿಯೇ ಈ ಕಚ್ಚಿ ಮೇಮನ್ ಮಸೀದಿ. ನಗರದ ದೊಡ್ಡಪೇಟೆಯ ಅಶೋಕ ರಸ್ತೆಯಲ್ಲಿರುವ ಈ ಮಸೀದಿಯು ಸುಮಾರು ನೂರ ಮೂವತ್ತೈದು ವರ್ಷಗಳ ಹಿಂದೆ ಗುಜರಾತಿನಿಂದ ವ್ಯಾಪಾರಕ್ಕೆಂದು ಮೈಸೂರಿಗೆ ವಲಸೆ ಬಂದು, ಇಲ್ಲೇ ಖಾಯಂ ಆಗಿ ನೆಲಸಿದ ಕಚ್ ಸೇಠ್ ಜನಾಂಗದವರು ತಮ್ಮ ಜನಾಂಗದವರ ಆರಾಧನಾ ಗೃಹವಾಗಿ ಕಟ್ಟಿಸಿಕೊಂಡ ಮಸೀದಿ ಇದಾಗಿದೆ. ಬಹಳ ಆಕರ್ಷಕ ಮತ್ತು ನಗರದಲ್ಲೇ ಅತ್ಯಂತ ಸುಂದರ ಮಸೀದಿ ಇದಾಗಿದೆ. ಜನರ ಬೆಂಬಲ ಮತ್ತು ಆರ್ಥಿಕ ಸಹಕಾರದಿಂದ ಉತ್ತಮ ರೀತಿಯಲ್ಲಿದೆ. ಕಚ್ ಸೇಠ್ ಜನಾಂಗದವರೇ ಈ ಮಸೀದಿಯ ವ್ಯವಸ್ಥಾಪಕರಾಗಿ, ಮೇಲ್ವಿಚಾರಕರಾಗಿ ಕೆಲಸ ನಿರ್ವಹಿಸುತ್ತಾ ಬಂದಿದ್ದಾರೆ. ಹೀಗಾಗಿಯೇ ಇದಕ್ಕೆ 'ಸೇಠ್‌ಗಳ ಮಸೀದಿ' ಎಂದೂ ಕರೆಯುತ್ತಾರೆ. ಈ ಮಸೀದಿಯ ಮುಂಭಾಗದಲ್ಲಿ ಸುಂದರವಾದ ಕೊಳವಿದೆ. ಆ ಕೊಳದ ಸುತ್ತಲು ವಝೂ ಮಾಡಲು ಕುಳಿತುಕೊಳ್ಳುವುದಕ್ಕೆ ಚಿಕ್ಕ ಚಿಕ್ಕ ಕಲ್ಲಿನ ಬೆಂಚುಗಳಿವೆ. ಮುಸ್ಲಿಂ ಬಾಂಧವರು ಶಾಂತಿ ಮತ್ತು ಸೌಹಾರ್ದತೆಯಿಂದ ಪ್ರತಿ ದಿನ ತೆರಳಿ ಪ್ರಾರ್ಥನೆ ಮಾಡುವ ಅನುಕೂಲತೆಯನ್ನು ಹೊಂದಿದೆ.

**ಖಾಕಿಷಾ ಮಸೀದಿ**

ಮೈಸೂರು ನಗರದ ಚಾಮರಾಜೇಂದ್ರ ವೃತ್ತದಿಂದ ಅಶೋಕಾ ರಸ್ತೆ ದೊಡ್ಡ ಗಡಿಯಾರದ ಪೂರ್ವಕ್ಕೆ ಹೋಗುವ ಬಲಕ್ಕೆ ಒಂದು ಅಡ್ಡ ರಸ್ತೆಯಲ್ಲಿ, ಹಳೆಯ ಮತ್ತು ಹೊಸ ಅಂಚೆ ಕಛೇರಿಗಳ ನಡುವೆ ಈ ಖಾಕಿಷಾ ಮಸೀದಿ ಇದೆ. ಈಗಿನ ಅಪೇರಾ ಹೌಸ್‌ನ ಉತ್ತರ ಭಾಗದಲ್ಲಿದೆ. ಈ ಮಸೀದಿಯು ಖಾಕೀ ಷಾ ಎಂಬ ಹೆಸರಿನ ಒಬ್ಬ ಪ್ರಸಿದ್ಧ ಪೈಲ್ವಾನನಿಂದ ಕಟ್ಟಲ್ಪಟ್ಟಿತು. ಇದೇ ಸ್ಥಳದಲ್ಲಿ ಆತನ ಗೋರಿಯೂ ಸಹ ಇದೆ. ಇದು ಚಿಕ್ಕದಾದರೂ ಈಚೆಗೆ ಅಭಿವೃದ್ಧಿಪಡಿಸಲ್ಪಟ್ಟು ನೋಡಲು ಬಹಳ ಸುಂದರವಾಗಿದೆ.

ಈ ಮಸೀದಿಯ ಮುಂಭಾಗದಲ್ಲೂ ಸುಂದರವಾದ ಕೊಳ ಹಾಗೂ ಸುತ್ತಲೂ ಚಿಕ್ಕದಾದ ಬೆಂಚುಗಳಿವೆ. ಇಲ್ಲಿ ಒಂದು ಪರ್ಶಿಯನ್ ಭಾಷೆಯ ಶಾಸನ ದೊರೆತಿದ್ದು, ಅದರಲ್ಲಿ ಈ ಮಸೀದಿಯನ್ನು ಕ್ರಿ.ಶ.೧೮೪೯ರಲ್ಲಿ ಕಟ್ಟಲು ಆರಂಭಿಸಿ ಕ್ರಿ.ಶ.೧೮೮೨ರಲ್ಲಿ ಮುಗಿಸಲಾಯಿತು ಎಂಬ ಉಲ್ಲೇಖವಿದೆ. ನಗರದ ಮಧ್ಯ ಭಾಗದಲ್ಲಿರುವುದರಿಂದ ಸಹಜವಾಗಿಯೇ ಈ ಮಸೀದಿಯಲ್ಲಿ ಬಹಳಷ್ಟು ಮುಸ್ಲಿಮರು ದಿನದ ಐದು ಹೊತ್ತು ಪ್ರಾರ್ಥನೆಯಲ್ಲಿ ಭಾಗವಹಿಸುತ್ತಾರೆ. ಪ್ರತಿ ಭಾನುವಾರದಂದು ವಿಶೇಷ ಧಾರ್ಮಿಕ ಉಪನ್ಯಾಸಗಳು ನಡೆಯುತ್ತವೆ.

**ಅಂಗರಕ್ಷಕ ಮಸೀದಿ**

ಈ ಮಸೀದಿಯು ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನ ಹತ್ತಿರ ಹಿಂದೆ ಅಶ್ವಾರೋಹಿ ಅಂಗರಕ್ಷಕರ ವಸತಿಗಳಿದ್ದ ಸ್ಥಳದಲ್ಲಿ ಇದೆ. ಮೈಸೂರು ಅರಸರ ಸೇನೆಯಲ್ಲಿದ್ದ ಮುಸ್ಲಿಮರ ಉಪಯೋಗಕ್ಕಾಗಿ ನಿರ್ಮಾಣಗೊಂಡ ಈ ಮಸೀದಿಗೆ ಮೈಸೂರು ಮಹಾರಾಜ ಕೃಷ್ಣರಾಜ ಒಡೆಯರು ಕ್ರಿ.ಶ. ೧೯೨೨ರಲ್ಲಿ ಶಿಲಾನ್ಯಾಸ ಮಾಡಿರುವ ಸಂಗತಿಯನ್ನು ಈ ಮಸೀದಿಯಲ್ಲಿ ದೊರೆತ ಪರ್ಶಿಯನ್ ಭಾಷೆಯ ಒಂದು ಶಾಸನದಲ್ಲಿ ದಾಖಲಿಸಿದೆ. ಇಂದಿಗೂ ಈ ಮಸೀದಿಯಲ್ಲಿ ಐದು ಹೊತ್ತಿನ ಪ್ರಾರ್ಥನೆ ನಡೆಯುತ್ತಿದೆ.

**ಮಸಜಿದ್ ಎ ಆಜಮ್**

ನಗರದ ಅಶೋಕ ರಸ್ತೆಯಲ್ಲಿರುವ ಮಿಲಾದ್ ಬಾಗ್ ಉದ್ಯಾನವನದ ಎದುರಿಗೆ ಈ ಮಸೀದಿ ಇದೆ. ದೊಡ್ಡ ಪೇಟೆಯ ಕಚ್ಚಿಮೇಮನ್ ಮಸೀದಿಯ ಉತ್ತರಕ್ಕೆ ಸ್ವಲ್ಪ ದೂರದಲ್ಲಿದೆ. ಇದರ ಸುತ್ತಲೂ ಮುಸ್ಲಿಂ ಬಾಂಧವರ ಮನೆಗಳಿದ್ದು ಪ್ರತಿ ದಿನ ಐದು ಹೊತ್ತು ನಮಾಜ್ ಮಾಡಲು ಅನುಕೂಲವಿದೆ. ಒಂದು ಸ್ಥಳೀಯ ಸಮಿತಿಯ ಆಶ್ರಯದಲ್ಲಿ ನಡೆಯುತ್ತಿರುವ ಈ ಮಸೀದಿಯ ಹೊರಗಡೆಯ ಬೇಲಿ ಸುಂದರವಾದ ಉಕ್ಕಿನ ಕಂಬಗಳಿಂದ ಮಾಡಲ್ಪಟ್ಟಿದೆ. ಒಳಗಡೆಗೆ ಪ್ರವೇಶಿಸುವಾಗ ಒಂದು ಸಣ್ಣ ಗೋಪುರವಿದ್ದು ಮಸೀದಿಯ ಅಂದವನ್ನು ಹೆಚ್ಚಿಸುತ್ತದೆ. ಒಳಾಂಗಳದಲ್ಲಿ ನಯನ ಮನೋಹರವಾದ ಕೊಳ, ಕೊಳದ ಸುತ್ತಲೂ ಕೈ ತೊಳೆದುಕೊಳ್ಳುವಾಗ ಕುಳಿತುಕೊಳ್ಳುವ ನೆಲಕ್ಕೆ ಅಂಟಿಸಿರುವ ಕಲ್ಲಿನ ಸಣ್ಣ ಬೆಂಚುಗಳೂ ಇವೆ.

ಮಸೀದಿಯ ಎರಡು ಕಂಬಗಳೂ ಮಹಮ್ಮದೀಯ ಕಲಾ ಕೌಶಲ್ಯದಿಂದ ಕೂಡಿ ಮಾಡಗೂಡುಗಳಿಂದ ಕೊರೆಯಲ್ಪಟ್ಟು ಬಹಳ ರಮ್ಯವಾಗಿದೆ. ಮಸೀದಿಯ ಪ್ರಾರ್ಥನಾ ಮಂದಿರ ನವೀನ ರೀತಿಯಲ್ಲಿ ಅಳವಡಿಸಲ್ಪಟ್ಟಿದ್ದು ನೋಡುವುದಕ್ಕೆ ತುಂಬಾ ಆಕರ್ಷಣೀಯವಾಗಿದೆ. ಇದು ಸುಮಾರು ೧೦೦ ವರ್ಷಗಳ ಹಿಂದೆ ಕಟ್ಟಿದ್ದೆಂದು ತಿಳಿದು ಬರುತ್ತದೆ. ಇದು ಒಂದು ಸ್ಥಳೀಯ ಸಮಿತಿಯ ಆಶ್ರಯದಲ್ಲಿ ನಡೆಯುತ್ತಿದೆ.

ಈ ಮಸೀದಿಯಲ್ಲಿ ಒಂದು ಫರ್ಶಿಯನ್ ಭಾಷೆಯ ಶಾಸನ ದೊರೆತಿದೆ. ಇದರಲ್ಲಿ ಈ ಮಸೀದಿಯನ್ನು ಷಾಃ ಅಲೀಪುರದ (ಪಂಜಾಬ್) ಸೂಫಿ ವ್ಯಕ್ತಿಯ ಒಪ್ಪಿಗೆಯ ಮೇರೆಗೆ ಕ್ರಿ.ಶ. ೧೯೨೭ರಲ್ಲಿ ಕಟ್ಟಿದೆ ಎಂದು ಬರೆಯಲಾಗಿದೆ.

**ಈದ್ಗಾ ಮೈದಾನ**

ಮೈಸೂರು ನಗರದಲ್ಲಿನ ಉತ್ತರ ಭಾಗದ ತಿಲಕ್ ನಗರದಲ್ಲಿ ಎತ್ತರವಾದ ಸ್ಥಳದಲ್ಲಿ ಕಟ್ಟಲ್ಪಟ್ಟಿರುವ ಮೈದಾನದಲ್ಲಿರುವ ಮಸೀದಿ. ವರ್ಷಕ್ಕೆ ಎರಡು ಬಾರಿ ಮುಸ್ಲಿಮರ ಪವಿತ್ರ ಹಬ್ಬಗಳಾದ ರಂಝಾನ್ ಮತ್ತು ಬಕ್ರಿದ್ ಸಮಯದಲ್ಲಿ ನಗರದ ಮಹಮ್ಮದೀಯ ಸಹೋದರರೆಲ್ಲರೂ ಒಟ್ಟುಗೂಡಿ ಇಲ್ಲಿನ ಈದ್ಗಾ ಮೈದಾನದಲ್ಲಿ ನಡೆಸುವ ಸಾಮೂಹಿಕ ಪ್ರಾರ್ಥನೆಯ ದೃಶ್ಯವು ಮನಮೋಹಕವಾಗಿ ಕಾಣುತ್ತದೆ.

ನಗರದ ಈ ಈದ್ಗಾ ಮೈದಾನವು ಉತ್ತರ ಭಾಗದಿಂದ ಬನ್ನಿಮಂಟಪದ ರಸ್ತೆಯ ಮೂಲಕ ನಗರಕ್ಕೆ ಬರುವ ಪ್ರಯಾಣಿಕರನ್ನು ಆಕರ್ಷಿಸುತ್ತದೆ. ಇದರ ಸುತ್ತಲೂ ದೊಡ್ಡ

ಮೈದಾನವಿದ್ದು ಮಸೀದಿ ಹತ್ತಿರದಲ್ಲಿರುವ ಎದುರಿನ ಪ್ರಾರ್ಥನಾ ಸ್ಥಳದ ನೆಲ ಗಟ್ಟಿಗಾರೆಯಿಂದ ಮಾಡಲ್ಪಟ್ಟಿರುವುದರಿಂದ ಸಾಮೂಹಿಕ ಪ್ರಾರ್ಥನೆಗೆ ಯೋಗ್ಯವಾಗಿದೆ. ಈ ಮೈದಾನದಲ್ಲಿ ಅಲ್ಲಲ್ಲಿ ಮರಗಳನ್ನು ನೆಟ್ಟಿರುವುದರಿಂದ ಇವು ಪ್ರಾರ್ಥನೆಗೆ ಬರುವವರನ್ನು ಬಿಸಿಲಿನಿಂದ ರಕ್ಷಿಸುತ್ತವೆ. ಈ ಸ್ಥಳ ಉತ್ತಮ ಹವಾಗುಣದಿಂದ ಕೂಡಿರುವುದರಿಂದ ನಗರದ ಉತ್ತರಭಾಗದ ಜನರು ಪ್ರತಿ ಸಂಜೆ ವಿಶ್ರಾಂತಿಗಾಗಿ ತೆರಳುವ ಪ್ರಶಾಂತ ಸ್ಥಳವಾಗಿದೆ.

ಮೈಸೂರು ನಗರದಲ್ಲಿರುವ ಒಟ್ಟು ಮೂರು ಈದ್ಗಾ ಮೈದಾನಗಳಲ್ಲಿ (ಮುಸ್ಲಿಮರ ಪವಿತ್ರ ರಂಜ಼ಾನ್ ಮತ್ತು ಬಕ್ರೀದ್ ಹಬ್ಬದ ದಿನಗಳಂದು ಸಾಮೂಹಿಕವಾಗಿ ಪ್ರಾರ್ಥನೆ ಮಾಡುವ ಸ್ಥಳ) ಈ ತಿಲಕ್ ನಗರದಲ್ಲಿನ ಈದ್ಗಾ ಮೈದಾನದ ಜೊತೆಗೆ ರಾಜೀವ್ ನಗರ ಮತ್ತು ಗೌಸಿಯಾ ನಗರದಲ್ಲೂ ಇದೆ. ವರ್ಷದಲ್ಲಿ ಎರಡು ಬಾರಿ ಪವಿತ್ರ ರಂಜ಼ಾನ್ ಮತ್ತು ಬಕ್ರೀದ್ ಹಬ್ಬದ ದಿನಗಳಂದು ಮೈಸೂರು ನಗರದ ಹಾಗೂ ಸುತ್ತಮುತ್ತಲಿನ ಮುಸ್ಲಿಂ ಬಾಂಧವರು ಇಲ್ಲಿ ಒಗ್ಗಟ್ಟಾಗಿ ಸೇರಿ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸುವ ದೃಶ್ಯವು ರೋಮಾಂಚನಕಾರಿಯಾಗಿರುತ್ತದೆ.

**ಮೀರ್ ಮಹಮ್ಮದ್ ಮಸೀದಿ ಅಥವಾ ನವಾಬ್ ಸಾಹೇಬ್ ಮಸೀದಿ**

ಮೈಸೂರು ನಗರದಲ್ಲೇ ಬಹಳ ದೊಡ್ಡದಾದ ನೂರು ಅಡಿ ರಸ್ತೆ ಎಂದು ಕರೆಯಲ್ಪಡುವ ಜಯಚಾಮರಾಜ ರಸ್ತೆಯಲ್ಲಿ ಈ ಮೀರ್ ಮಹಮ್ಮದ್ ಮಸೀದಿ ಇದೆ. ಇದರ ನೇರ ಎದುರಿನಲ್ಲಿ ರಸ್ತೆಯ ಇನ್ನೊಂದು ಪಕ್ಕದಲ್ಲಿರುವ ಕಟ್ಟಡವು ಶ್ರೀರಂಗಪಟ್ಟಣದಲ್ಲಿರುವ ಟಿಪ್ಪು ಸುಲ್ತಾನನ ಬೇಸಿಗೆಯ ಅರಮನೆಯ ಪುಟ್ಟ ಪಡಿಯಚ್ಚಿನಂತೆ ಇರುವ ಮನೆ. ಈ ಮನೆಯ ಒಡೆತನವು ಟಿ.ಎನ್. ನಿಜಾಮುದ್ದೀನ್ ಅಲೀಖಾನರಿಗೆ ಸೇರಿದ್ದು ಎನ್ನಲಾಗಿದೆ. ಈತ ಟಿಪ್ಪು ಸುಲ್ತಾನನ ಕುಟುಂಬಕ್ಕೆ ಸೇರಿದವನಾಗಿದ್ದಾನೆ. ಟಿಪ್ಪುವಿನ ಸೋದರ ಸಂಬಂಧಿ ಹಾಗೂ ಸೇನೆಯ ವರಿಷ್ಠ ಅಧಿಕಾರಿ ಕಮಾಂಡರ್ ಇನ್ ಚೀಫ್ ಆಗಿದ್ದ ಕಮುರುದ್ದೀನ್ ಈ (ಕಮುರುದ್ದೀನ್ ಸೇನೆಯ ಮುಖ್ಯಸ್ಥನಾಗಿದ್ದಾಗಲೇ ಟಿಪ್ಪುವಿನ ಧೋರಣೆಯಿಂದ ಬೇಸತ್ತು, ಅವನ ಸಹವಾಸವನ್ನು ತ್ಯಜಿಸಿ ಬ್ರಿಟಿಷರಿಗೆ ಬೇಷರತ್ ಶರಣಾಗತನಾದ. ಅವನ ವಿಧೇಯತೆ ಹಾಗೂ ಟಿಪ್ಪುವಿನ ರಹಸ್ಯ ತಂತ್ರಗಳ ಬಗ್ಗೆ ಬ್ರಿಟಿಷರಿಗೆ ಅವನು ನೀಡುತ್ತಿದ್ದ ಸಲಹೆ ವಿವರಗಳು ಬ್ರಿಟಿಷರಿಗೆ ಬಹಳ ಮೆಚ್ಚುಗೆಯಾಗಿದ್ದವು) ಎಂಬಾತನ ಮರಿ ಮೊಮ್ಮಗ.

ಶ್ರೀರಂಗಪಟ್ಟಣದಲ್ಲಿರುವ ಬೇಸಿಗೆ ಮನೆಯ ನಮೂನೆಯಲ್ಲಿ ಒಂದು ಮನೆ ಇದೆ. ಇದು ಟಿಪ್ಪು ಸುಲ್ತಾನ್ ಅರಮನೆ ಎಂದು ಕರೆಯಲ್ಪಡುತ್ತದೆ. ಟಿಪ್ಪು ಸುಲ್ತಾನ್ ಮೈಸೂರಿಗೆ ಬಂದಾಗ ಈ ಮನೆಯಲ್ಲಿ ವಾಸಿಸುತ್ತಿದ್ದನೆಂದು ಹೇಳಲಾಗುತ್ತದೆ. ಈ ಮನೆಯ ಉತ್ತರಕ್ಕೆ ಎದುರು ಭಾಗದಲ್ಲಿ ಈ ಮೀರ್ ಮಹಮ್ಮದ್ ಮಸೀದಿ ಇದೆ. ಇದು ಟಿಪ್ಪು ಸುಲ್ತಾನರ ವಂಶದವರ ಆಡಳಿತದಲ್ಲಿ ನಡೆಯುತ್ತಿದೆ. ಈ ಮಸೀದಿಯ ಹಿಂಭಾಗ ಮತ್ತು ಮುಂಭಾಗದಲ್ಲಿ ನೋಡುವುದಕ್ಕೆ ಸುಂದರವಾದ ಹೂದೋಟವಿದೆ.

ಈ ಮಸೀದಿಯ ಒಳಗೋಡೆಯಲ್ಲಿ ಒಂದು ಪರ್ಶಿಯನ್ ಶಾಸನವಿದೆ. ಇದರಲ್ಲಿರುವ ತೇದಿಯ ಪ್ರಕಾರ ಇದು ಕ್ರಿ.ಶ.೧೯೨೯ಕ್ಕೆ ಸೇರಿದೆ. ಇದು ಮಸೀದಿಯ ನಿರ್ಮಾಣದ ಕಾಲ. ಮುರ್ಷಿದ್ ಮೌಲಾನಾ ಷಾಃ ಜಮಾತ್ (ಸಯ್ಯದ್ ಜಮಾತ್ ಅಲೀ ಷಾಃ ಸಾಹೇಬ್) ಪಂಜಾಬ್‌ನ ಅಲೀಪುರಿ ಅವರ ಪ್ರಯತ್ನದಿಂದ ಈ ಮಸೀದಿಯನ್ನು ಕಟ್ಟಿದೆ ಎಂದು ಇದರಲ್ಲಿ ಹೇಳಿದೆ. ಇದರಲ್ಲಿ ಮಸೀದಿಯನ್ನು 'ಜೀನತ್ ಉಲ್ ಮಸಾಜೀದ್' ಅಂದರೆ ಮಸೀದಿಗಳಲ್ಲೇ ಇದು ಸುಂದರವಾದ ಮಸೀದಿ ಎಂದು ಕರೆದಿದೆ.

ನವಾಬ್ ಮೀರ್ ಟಿ.ಎನ್. ನಿಜಾಮುದ್ದೀನ್ ಅಲೀಖಾನರ ತಂದೆ ನವಾಬ್ ಸೈಯದ್ ಮಹಮದ್ ಟಿಪ್ಪು ಸುಲ್ತಾನ್ ಅಲಿಖಾನ್ ಸಾಹೇಬ್ ಅವರು ಕೇವಲ ತಮ್ಮ ಕುಟುಂಬದವರ ಪ್ರಾರ್ಥನೆಗಾಗಿ ಮಾತ್ರ ಈ ಮಸೀದಿಯನ್ನು ನಿರ್ಮಿಸಿದವರು. ಈಗಲೂ ಈ ಮಸೀದಿಯ ನಿರ್ವಹಣೆ ಮಾಡುತ್ತಿರುವವರು ಇದೇ ಕುಟುಂಬದ ಇಂದಿನ ಪೀಳಿಗೆಯವರು. ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಇವರೆಲ್ಲರೂ ತಮ್ಮನ್ನು ತಾವು ತೊಡಗಿಸಿಕೊಂಡು ಮೈಸೂರಿನ ಗಣ್ಯ ನಾಗರಿಕರಾಗಿ ಗುರುತಿಸಿಕೊಂಡಿದ್ದಾರೆ.

**ಫಿರ್‌ದೌಸ್ ಮಸೀದಿ**

ಎಲ್ಲಾ ಆಧುನಿಕ ಸೌಲಭ್ಯವನ್ನು ಹೊಂದಿರುವ ಫಿರ್‌ದೌಸ್ ಮಸೀದಿಯು ಬನ್ನಿಮಂಟಪದ ಮೈಸೂರು–ಬೆಂಗಳೂರು ರಸ್ತೆಯ ಪಕ್ಕದಲ್ಲಿರುವ ರಸ್ತೆಯಲ್ಲಿದೆ. ಮುಸ್ಲಿಮರ ಪವಿತ್ರ ರಂಜ಼ಾನ್ ಉಪವಾಸ ಮಾಸದಲ್ಲಿ ನಡೆಯುವ 'ತರಾಬಿ ನಮಾಜ಼್' ಎಂಬ ವಿಶೇಷ ಪ್ರಾರ್ಥನೆಯಲ್ಲಿ ಮಹಿಳೆಯರಿಗೆ ಭಾಗವಹಿಸಲು ಸೌಲಭ್ಯವಿರುವುದು ವಿಶೇಷವಾಗಿದೆ. ಈ ಕಾರಣದಿಂದಾಗಿ, ಮಹಿಳೆಯರೂ ಮಹನೀಯರೊಂದಿಗೆ ಈ ವಿಶೇಷ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುತ್ತಾರೆ. ಈ ಮಾದರಿಯ ಮಸೀದಿಗಳು ಕೇರಳ ರಾಜ್ಯದಲ್ಲಿ ಹೆಚ್ಚಾಗಿರುವುದನ್ನು ಕಾಣಬಹುದು. ಈ ಮಸೀದಿಯಲ್ಲಿ ಐದು ಹೊತ್ತಿನ ನಮಾಜ಼್ ಮಾಡುವುದಕ್ಕೆ ಅನುಕೂಲವಿದೆ. ಇದರ ಮುಭಾಂಗದಲ್ಲಿ ವಜ಼ೂ ಮಾಡಲು ಸುಂದರವಾದ ಕೊಳ ಹಾಗೂ ಕುಳಿತುಕೊಳ್ಳುವುದಕ್ಕೆ ಬೆಂಚುಗಳಿವೆ.

**ಮೈಸೂರು ನಗರದ ಇತರೆ ಮಸೀದಿಗಳು**

ಆಧುನಿಕ ಸೌಲಭ್ಯಗಳನ್ನು ಹೊಂದಿರುವ ಮೈಸೂರು ನಗರದ ಬಹುತೇಕ ಎಲ್ಲಾ ಬಡಾವಣೆಗಳಲ್ಲಿ ಮುಸ್ಲಿಮರು ಪ್ರಾರ್ಥನೆ ಸಲ್ಲಿಸಲು ಉಪಯೋಗವಾಗುವ ಹಾಗೆ ಮಸೀದಿಗಳನ್ನು ನಿರ್ಮಾಣ ಮಾಡಲಾಗಿದೆ. ನಗರದ ಲಷ್ಕರ್ ಮೊಹಲ್ಲಾದ ಸಾಡೆ ರಸ್ತೆಯಲ್ಲಿನ ದರ್ಗಾ ಎ ಮಸ್‌ಜಿದ್, ಕಮಾನಿ ದರ್‌ವಾಜಾ ಮಸ್‌ಜಿದ್, ಟಿಪ್ಪು ವೃತ್ತದ ಬಳಿಯ ಉಮರ್ ಖಾನ್ ಮಸೀದಿ, ಜ್ಯೋತಿನಗರದ ಮಸೀದಿ, ಅಗ್ರಹಾರದಲ್ಲಿರುವ ಆದಂ ಖಾನ್ ಮಸೀದಿ, ಮಂಡಿ ಮೊಹಲ್ಲಾದಲ್ಲಿನ ಮಸ್‌ಜಿದ್ ಎ ಈದ್ಗಾ, ನಜರ್‌ಬಾದಿನಲ್ಲಿರುವ ಮಸೀದಿ, ಮಸ್‌ಜಿದ್ ಬಾಗ್‌ಬಾನ್, ಮದೀನ ಮಸೀದಿ, ಮಹ್ದವೀಯ ಖುರ್‌ಸೀದ್ ಮಸೀದಿ, ಅಹ್ಲೆ ಹದೀಸ್ ಮಸೀದಿ, ರಹಮಾನಿಯಾ ಮೊಹಲ್ಲಾದಲ್ಲಿನ ರೆಹಮಾನಿಯಾ ಮಸೀದಿ, ಜೀನತುಲ್ ಮಸೀದಿ, ಮಸ್‌ಜಿದ್ ನಕ್ಷ್‌ಬಂದಿಯ, ಮಸ್‌ಜಿದ್ ಎ ಷಾ ಮೊಹಮ್ಮದ್ ಹಯಾತ್, ನೂರಡಿ ರಸ್ತೆಯ ಪಕ್ಕದಲ್ಲಿನ ಫೀಲ್ ಖಾನಾ ಮಸೀದಿ, ಮಸ್‌ಜಿದ್ ಎ ನೂರ್ ಇಲಾಹಿ, ಖಾದ್ರಿಯ ಮಸೀದಿ, ಸವಾರ್‌ಲೈನ್ ಮಸೀದಿ, ಮೀರಾನ್ ಬೇಗ್ ಮಸೀದಿ, ಷಿಯಾ ಪಂಗಡದವರ ಮಸ್‌ಜಿದ್ ಎ ಜಫೇರಿಯಾ ಮಸೀದಿ, ಸರಸ್ವತೀಪುರಂನಲ್ಲಿರುವ ನ್ಯೂ ಮುಸ್ಲಿಂ ಹಾಸ್ಟೆಲ್ ಮಸೀದಿ, ಮಖಾನ್ ಮಸೀದಿ, ಷಾಹೀ ಮಸೀದಿ, ಮಸ್‌ಜಿದ್ ಎ ಬಿಲಾಲ್, ಮಸ್‌ಜಿದ್ ಎ ಫಾರೂಖಿಯಾ, ಮಸ್‌ಜಿದ್ ಎ ಹಿಲಾಲ್, ಮಸ್‌ಜಿದ್ ಎ ಮುಬೀನ್, ಮದೀನ ಮಸೀದಿ, ಸರ್ಕಾರಿ ಅತಿಥಿ ಗೃಹದ ಎದುರಿಗೆ ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ಯಾ ಅಲ್ಲಾಹ ಮಸೀದಿ, ರಾಜೀವ್ ನಗರದಲ್ಲಿರುವ ಮಸ್‌ಜಿದ್ ಎ ಖೈಫ್, ವಸಂತನಗರದಲ್ಲಿರುವ ಮಸ್‌ಜಿದ್ ಎ ಆಮೀನ, ಬನ್ನಿಮಂಟಪದಲ್ಲಿರುವ ಮಸ್‌ಜಿದ್ ಎ ಕೌಸರ್, ನಾಚನಹಳ್ಳಿ ಪಾಳ್ಯದಲ್ಲಿರುವ ಮಸ್‌ಜಿದ್ ಎ ಮೊಹಮ್ಮೂದ, ಶಾಂತಿನಗರದಲ್ಲಿರುವ ಏಕ್ ಮಿನಾರ್ ಕಿ ಮಸ್‌ಜಿದ್, ಗೌಸಿಯಾ ನಗರದಲ್ಲಿರುವ ಮಸೀದಿಗಳು, ಸಿದ್ದಿಖಿ ನಗರದಲ್ಲಿರುವ ಮಸೀದಿ, ಮೈಸೂರು–ಇಲವಾಲ ರಸ್ತೆಯಲ್ಲಿ ಕುಕ್ಕರಹಳ್ಳಿ ಕೆರೆಯ ಪಕ್ಕದಲ್ಲಿರುವ

ಮುರಾದ್ ಷಾಃ ಬೀಬೀ (ಸಿಎಫ್‌ಟಿಆರ್‌ಐ) ಮಸೀದಿ ಹೀಗೆ ಇನ್ನೂ ಅನೇಕ ಮಸೀದಿಗಳನ್ನು ಮೈಸೂರು ನಗರದಲ್ಲಿ ಹೆಸರಿಸಬಹುದು. ಇವಲ್ಲದೆ ನಗರದ ವಿವಿಧ ಬಡಾವಣೆಗಳಲ್ಲಿ ಇತ್ತೀಚೆಗೆ ನಿರ್ಮಿಸಿರುವ ಇನ್ನೂ ಅನೇಕ ಮಸೀದಿಗಳಿರುವುದನ್ನು ಗಮನಿಸಬಹುದು.

ಇದಲ್ಲದೆ ಸಿದ್ದಿಖೀನಗರದಲ್ಲಿ ದೇವನೂರು–ರಾಜೀವ್ ನಗರದಲ್ಲಿ (ಮದರಸಾ ಎ ಹಮೀದಿಯಾ) ಹಾಗೂ ನಗರದ ಇತರೆ ಕಡೆಗಳಲ್ಲಿನ ಮದರಸಾಗಳಿಗೆ ಹೊಂದಿಕೊಂಡಂತೆ ಮಸೀದಿಗಳಿವೆ. ಈ ಮದರಸಾಗಳನ್ನು ಧಾರ್ಮಿಕ ವ್ಯಾಸಂಗ ಮಾಡುವವರ ಅನುಕೂಲಕ್ಕಾಗಿ ಕಟ್ಟಿದ್ದಾರೆ. ಇಂತಹ ಕೆಲವು ಧಾರ್ಮಿಕ ಶಾಲೆಗಳಲ್ಲಿ ಊಟ ವಸತಿಯ ಸೌಲಭ್ಯವೂ ಇದೆ. ಇಂತಹವರ ಉಪಯೋಗಕ್ಕಾಗಿ ಈ ಮಸೀದಿಗಳನ್ನು ಕಟ್ಟಿದ್ದಾರೆ. ಮೈಸೂರು ನಗರದಲ್ಲಿ ಅನೇಕ ಕಡೆ ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕವಾದ ಅನಾಥಾಲಯಗಳಿವೆ. ಇವುಗಳಿಗೆ ಹೊಂದುಕೊಂಡಂತೆಯೂ ಮಸೀದಿಗಳಿವೆ. ಇವು ಇಲ್ಲಿಯ ನಿವಾಸಿಗಳಿಗೆ ಪ್ರಾರ್ಥನೆ ಮಾಡಲು ಅನುಕೂಲವಾಗಿವೆ.

ನಗರದ ಸಯ್ಯಾಜಿರಾವ್ ರಸ್ತೆಯಲ್ಲಿರುವ 'ಇಸ್ಲಾಮಿಯಾ ಯತೀಮ್ ಖಾನಾ' ಎಂಬ ಅನಾಥಾಲಯದ ಕಟ್ಟಡದಲ್ಲಿ ಒಂದು ಶಾಸನವಿದೆ. ಅದರಲ್ಲಿ ಈ ಕಟ್ಟಡದ ಶಂಕು ಸ್ಥಾಪನೆಯನ್ನು ಕ್ರಿ.ಶ. ೧೯೩೧ರ ಮೇ ತಿಂಗಳ ೩೦ನೇ ತಾರೀಖಿನಂದು ಮಾಡಿದೆ ಎಂದಿದೆ. ಈ ಅನಾಥಾಲಯದ ಅಡಿಪಾಯದ ಕಲ್ಲನ್ನು ಖಾನ್ ಬಹಾದೂರ್ ಹಾಜಿ ಸರ್ ಇಸ್ಮಾಯಿಲ್ ಸೇಠ್ ಕೆ.ಟಿ. ಅವರು ಹಾಕಿದರೆಂದು ಈ ಶಾಸನ ಹೇಳಿದೆ. ಇದರಲ್ಲಿ ಈ ಅನಾಥಾಲಯವನ್ನು 'ಯತೀಮ್ ಖ಼ಾನಾ ಇ ಇಸ್ಲಾಮಿಯ' ಮೈಸೂರು ಎಂದು ಕರೆದಿದೆ.

ಹೀಗೆ 'ಸಾಂಸ್ಕೃತಿಕ ನಗರಿ'ಯ ರಾಜಧಾನಿಯಾಗಿರುವ ಮೈಸೂರು ನಗರವು ವಿವಿಧ ಬಡಾವಣೆಗಳಾಗಿ ವಿಸ್ತಾರಗೊಂಡಂತೆ ಮಸೀದಿಗಳ ಸಂಖ್ಯೆಯೂ ಹೆಚ್ಚಾಗುತ್ತಾ ಬಂದಿರುವುದನ್ನು ಗಮನಿಸಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**

೧. ಮೈಸೂರು ದರ್ಶನ ಸಂಪುಟ ೧: ಪ್ರಸಾರಾಂಗ, ಕರಾಮುವಿ, ಮೈಸೂರು (ಮೊ.ಮು.) ೨೦೧೧
೨. ಮೈಸೂರು ನೂರಿನ್ನೂರು ವರ್ಷಗಳ ಹಿಂದೆ: ಪ್ರೊ. ಪಿ.ವಿ. ನಂಜರಾಜ ಅರಸು, ಅಭಿರುಚಿ ಪ್ರಕಾಶನ, ಮೈಸೂರು, (ಮೊ.ಮು.) ೨೦೦೭
೩. ಮೈಸೂರು ಒಂದು ಅಧ್ಯಯನ: ಎಂ.ಕೆ. ಲಿಂಗಯ್ಯ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೊ.ಮು. ೧೯೮೨
೪. ಶ್ರೀಮನ್ನಾಲ್ವಡಿ ಕೃಷ್ಣರಾಜ ಒಡೆಯರವರ ಚರಿತ್ರೆ: ಎಲ್ ಸ್ವಾಮಿರಾವ್: ಕನ್ನಡ ಸಾಹಿತ್ಯ ಪರಿಷತ್ತು: ೨೦೦೩
೫. ಕರ್ನಾಟಕದ ಪರಂಪರೆ ಸಂ–೨, ಮಧ್ಯಕಾಲೀನ ಮತ್ತು ಆಧುನಿಕ ಕಾಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಮ.ಮು ೨೦೦೬, ಪುಟ ೬೦೪
೬. ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ ೨: ಪ್ರ. ಸಂ ಡಾ. ಹಿ. ಶಿ. ರಾಮಚಂದ್ರೇಗೌಡ, ಮೈಸೂರು ವಿವಿ, ಮೈಸೂರು
೭. ಮೈಸೂರು ಜಿಲ್ಲಾ ಗೆಜೆಟಿಯರ್
೮. ಮೈಸೂರು ಜಿಲ್ಲೆಯ ಐತಿಹ್ಯಗಳು ಒಂದು ಅಧ್ಯಯನ: ಡಾ. ವೃಷಭಕುಮಾರ್
೯. ಅಂತರ್‌ಜಾಲ ತಾಣಗಳ ಮಾಹಿತಿ